ಕೊಂಡರಂತೂ ನೋಡಿದಷ್ಟೂ ಸಲ ನಗುವುಕ್ಕಿಸುವ ಪದ-ರೇಖೆಗಳ ಜುಗಲಬಂದಿ ಹುಟ್ಟಿಕೊಳ್ಳುತ್ತದೆ. ಈ ಪದ್ಯಕ್ಕೆ ಒಂದು ಕಡೆ ಮರದಡಿಯಲ್ಲಿ ಆರಾಮಾಗಿ ನಾಲಿಗೆ ಚಾಚಿಕೊಂಡು ಮಲಗಿರುವ ಎರಡು ನಾಯಿಗಳ ಚಿತ್ರವಿದೆ. ಮತ್ತೊಂದೆಡೆ ಒಂದಿಷ್ಟು ಗಂಡಸರು-ಹೆಂಗಸರು ಪರಸ್ಪರ ಮುಗಿಬಿದ್ದು ಜಗಳ ಮಾಡಿಕೊಳ್ಳುತ್ತಿದ್ದಾರೆ. ಆ ಜಗಳದ ಪಾತ್ರದ ಸುತ್ತ 'ಗುರ್...', 'ಬೌ...' 'ಬೌ...' ಎಂದು ಬರೆಯಲಾಗಿದೆ!

ಇನ್ನು ಕೆಲವು ಪದ್ಯಗಳು ಮಕ್ಕಳ ಓದಿಗೆ ಒಗ್ಗಿ ಕೊಳ್ಳುತ್ತಲೇ ಗಂಭೀರ ನೋಟವನ್ನೂ ಬೀರಿ ಚಕ್ಕನೇ ಗಮನಸೆಳೆಯುತ್ತವೆ.

'ಹೀಗೊಂದಿತ್ತು ಊರು' ಅಂಥ ಒಂದು ಪದ್ಯ. 'ಹೀಗೊಂದಿತ್ತು ಹಾವು / ಅದಕೆ ಹೆಡೆಯೇ ಇರ್ಲಿಲ್ಲ! / ಹೀಗೊಂದಿತ್ತು ನಾವು / ಅದಕೆ ಬುಡವೇ ಇರ್ಲಿಲ್ಲ!/ ಹೀಗೊಂದಿತ್ತು ಕನಸು / ಅದನು ಬಿತ್ತೇ ಇರ್ಲಿಲ್ಲ! / ಹೀಗೊಂದಿತ್ತು ಮನಸು / ಅದನು ತಟ್ಟೇ ಇರ್ಲಿಲ್ಲ'

ಈ ಪದ್ಯ ಮನಸಲ್ಲಿ ಹುಟ್ಟಿಸುವ ವಿಷಾದವನ್ನು ಮಕ್ಕಳ ಜಗತ್ತಿಗಷ್ಟೇ ಸೀಮಿತಗೊಳಿಸುವುದು ಹೇಗೆ?

'ಉಳ್ಳಾಗಡ್ಡಿ ಕತ್ತರ್ಸಿಕೊಂಡು/ ಕೆಳ್ಗ ಬೀಳ್ತಿತ್ತು
ನೀನ್ಯಾಕಮ್ಮ ಅಳ್ತೀಯಂತ / ಅಮ್ಮನ ಕೇಳ್ತಿತ್ತು'

ಎಂಬ ನಾಲ್ಕೇ ಸಾಲಿನ ಪದ್ಯ ದಾಟಿಸುವ ಭಾವತೀವ್ರತೆಯನ್ನು ಬರೀ ಮೋಜಿನ ಪದ್ಯವಾಗಿ ಹೇಗೆ ನೋಡುವುದು?

**'ಕಾಡಿಗೆ ಹೋಗೋ ರಾಮ-ಸೀತೆ/**
**ಈಗೆಲ್ಲಿ? ಈಗೆಲ್ಲಿ?**
**ಒಂದು ವೇಳೆ ಇದ್ರೂ ಅನ್ನೊ**
**ಕಾಡೆಲ್ಲಿ? ಕಾಡೆಲ್ಲಿ?'**

ಎನ್ನುವ ಪದ್ಯ ಒಂದು ಗಂಭೀರವಾದ ಸಮಸ್ಯೆಯನ್ನು ಯಾವ ಬೌದ್ಧಿಕ ಭಾರವೂ ಇಲ್ಲದೆ ಹೂ ಹಗುರವಾಗಿ ಮಕ್ಕಳ ಮನಸ್ಸಿಗೆ ದಾಟಿಸುವ ಶಕ್ತಿಯನ್ನು ಹೊಂದಿದೆ.

'ನಮ್ಮ ದೇವರು' ಪದ್ಯದಲ್ಲಿ ಲೇಖಕರು ಎಳೆಯ ಮನಸ್ಸಿನಲ್ಲಿ ಮೂಡಬೇಕಾದ ದೇವರ ಪರಿಕಲ್ಪನೆಯನ್ನು ತುಂಬ ಸುಂದರವಾಗಿ ಕಟ್ಟಿಕೊಡುತ್ತಾರೆ. ಅನ್ನ ಕೊಡುವ ಭೂಮಿ, ಬೆಳಕು ನೀಡೋ ಸೂರ್ಯ, ಜೀವ ಪೊರೆವ ಗಾಳಿ, ವಿದ್ಯೆ ಕಲಿಸೋ ಗುರು, ಬುದ್ಧಿ ಹೇಳುವ ಅಮ್ಮ ಇವರೆಲ್ಲರೂ ನಮ್ಮ ದೇವರು ಎಂದು ಹೇಳುತ್ತದೆ ಈ ಪದ್ಯ. ಈ ದೇವರು ಯಾವ ಜಾತಿ, ಧರ್ಮ, ದೇಶ, ಭಾಷೆಗಳ ಚೌಕಟ್ಟಿಗೂ ನಿಲುಕದ ವಿಶ್ವಾತ್ಮಕ ಎಂಬುದನ್ನು ಗಮನಿಸಬೇಕು. ಹೀಗೆ ಎಲ್ಲರಿಗೂ ಏಕವಾಗಿ ಕಾಣಿಸುವ ದೇವರ ಪರಿಚಯ ಮಾಡಿಕೊಡುವ ಪದ್ಯ ಬಹುತ್ವದ ಬೀಜವನ್ನು ಬಿತ್ತುತ್ತಲೇ ಕೊನೆಗೊಳ್ಳುತ್ತದೆ. ಅದರ ಕೊನೆಯ ಸಾಲುಗಳು ಹೀಗಿವೆ:

**ಹತ್ತು ಹಲವು**
**ರೂಪಗಳಲಿ**
**ನಮ್ಮ ದೇವರು**

**ಸದಾ ಹೀಗೆ**
**ನಮಗೆ-ನಿಮಗೆ**
**ಕಾಣಸಿಗುವರು**

ಇಲ್ಲಿನ ಪದ್ಯಗಳ ಬಗ್ಗೆಯಷ್ಟೇ ಹೇಳಿದರೆ 'ಬಿಸಿ ಬಿಸಿ ಬಾತು' ಓದಿದ ಅನುಭವವನ್ನು ಪೂರ್ತಿ ಹೇಳಿದಂತಾ ಗುವುದಿಲ್ಲ. ಈ ಪದ್ಯಗಳಲ್ಲಿನ ಪುಟಿಪುಟಿಯುವ ಜೀವಂತಿಕೆಗೊಂದು ಮೂರ್ತ ರೂಪ ಕೊಟ್ಟು ಮಜವನ್ನು ಸಾಕಷ್ಟು ಹೆಚ್ಚಿಸುವುದು ಇಲ್ಲಿನ ಅತ್ಯಾಕರ್ಷಕ ಚಿತ್ರಗಳು. ಖ್ಯಾತ ಸಂಗೀತ ನಿರ್ದೇಶಕ, ಕವಿ, ನಟ ವಿ. ಮನೋಹರ್ ರಚಿಸಿದ ಚಿತ್ರಗಳು ಈ ಪುಸ್ತಕದೊಳಗಿನ ಜಗತ್ತನ್ನು ಇನ್ನಷ್ಟು ರಂಗಾಗಿಸಿವೆ. ಪದ್ಯಗಳನ್ನು ಓದುತ್ತ ಕುಣಿಯಬಯಸುವ ಮನಸ್ಸುಗಳಿಗೆ ಏಣಿ ಹಾಕಿಕೊಡುವ ಕೆಲಸವನ್ನು ಈ ಪದ್ಯಗಳು ಮಾಡುತ್ತವೆ. ನೋಡಿದ ತಕ್ಷಣ ನಗೆಯುಕ್ಕಿಸುವ, ಬೆರಗು ಹುಟ್ಟಿಸುವ ಈ ಚಿತ್ರಗಳು ಮಕ್ಕಳ ಮನಸ್ಸನ್ನು ಕದಿಯುವುದರಲ್ಲಿ ಸಂಶಯವಿಲ್ಲ.

ಕೊನೆಯದಾಗಿ, ಮಕ್ಕಳ ಕೈ ಕೈ ಹಿಡಿದು ನಡೆಯುತ್ತ, ಕುಣಿಯುತ್ತ ನಲಿಯುತ್ತಿರಬೇಕಾದ ಈ ಪದ್ಯಗಳು ಎಷ್ಟರಮಟ್ಟಿಗೆ ಮಕ್ಕಳಿದ್ದಲ್ಲಿಗೆ ಮುಟ್ಟುತ್ತವೆ ಎಂಬ ಪ್ರಶ್ನೆಯೊಂದು ಹಾಗೆಯೇ ಉಳಿದುಬಿಡುತ್ತದೆ. ಆದರೆ ಈ ಪ್ರಶ್ನೆಗೆ ಉತ್ತರವನ್ನು ಲೇಖಕರಾಗಲಿ, ಈ ಪುಸ್ತಕವಾಗಲಿ ಕೊಡಲು ಸಾಧ್ಯವಿಲ್ಲ.

ಈ ಸಂಕಲನದ 'ಯಾಕೆ ಹೀಗೆ?' ಎಂಬ ಪದ್ಯ ಕೊನೆಗೊಳ್ಳುವುದು ಹೀಗೆ:

ದೊಡ್ಡೋರಂತ ದೊಡ್ಡೋರೆಲ್ಲ/ಯಾಕೆ ಇರ್ತಾರೆ?
ಸಣ್ಣೋರಂತ ಸಣ್ಣೋರ್ನೆಲ್ಲ/ ಸಣ್ಣ ಮಾಡ್ತಾರೆ!

ಈ ಪ್ರಶ್ನೆಗೆ ಉತ್ತರವನ್ನು ನಾವು ಕಂಡುಕೊಳ್ಳಬೇಕಾಗಿದೆ. ●